**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *29.07.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿತನು ವಕೀಲರನ್ನು ನೇಮಕ ಮಾಡಿಕೊಳ್ಳಲು ಕಾಲವಕಾಶವನ್ನು ಕೋರಿದ್ದು, ಸಾಕ್ಷಿದಾರರು ಪದೇ ಪದೇ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ಹೇಳಿದ್ದು ಮತ್ತು DLSA ಪರವಾಗಿ ಹಾಜರಾಗಿದ್ದ ಶ್ರೀಮತಿ ಜ್ಯೋತಿ ವಕೀಲರು ಸಹ ನ್ಯಾಯಾಲಯದಲ್ಲಿ ಹಾಜರಿದ್ದು ಆರೋಪಿತನ ಕೋರಿಕೆಯ ಮೇರೆಗೆ ದಿನಾಂಕ 09.07.2025 ರಂದು ಸಂಪೂರ್ಣ ಕಡತವನ್ನು ವಾಪಸ್ಸು ನೀಡಿರುವುದಾಗಿ ಹೇಳಿದ್ದು ಅಂದಿನಿಂದ ಇಂದಿನವರೆಗೆ ಆರೋಪಿತನು ವಕೀಲರನ್ನು ನೇಮಕ ಮಾಡಿಕೊಂಡಿರುವುದಿಲ್ಲ, ಸಾಕ್ಷಿದಾರರು ಬೆಂಗಳೂರಿನಿಂದ ಬಂದಿರುವುದರಿಂದ ಮತ್ತು ಪದೇ ಪದೇ ಬರಲು ಆಗುವುದಿಲ್ಲ ಎಂದು ಹೇಳಿದ್ದರಿಂದ ಆರೋಪಿತನಿಗೆ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು ಆದರೂ ಸಹ ಆರೋಪಿತನು ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಿರುವುದಿಲ್ಲ, ಆದ್ದರಿಂದ ಆರೋಪಿತನ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇ ಎ ಒ.,**

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**